# ಹಳೆಯ ಕಾಲಕ್ಕೆ ಕರೆದೊಯ್ಯುವ ಟಿಕೆಟ್

ಹಲವು ವರ್ಷಗಳ ಹಿಂದೆ ರೈಲಿನಲ್ಲಿ ಪ್ರಯಾಣಿಸಲು ನೀಡಲಾಗುತ್ತಿದ್ದ ಟಿಕೆಟ್‌ಗಳು ಗಾತ್ರದಲ್ಲಿ ಚಿಕ್ಕದಾಗಿದ್ದು, ದಪ್ಪನೆಯ ರಟ್ಟಿನಿಂದ ತಯಾರಿಸುತ್ತಿದ್ದರು. ಟಿಕೆಟ್ ಕ್ರಮಾಂಕ, ದಿನಾಂಕ, ದರ್ಜೆ, ಹೊರಡುವ ಮತ್ತು ತಲುಪುವ ಊರು, ಟಿಕೆಟ್ ದರ ಮುಂತಾದ ವಿವರಗಳನ್ನು ಟಿಕೆಟ್‌ನಲ್ಲಿ ನಮೂದಿಸಲಾಗುತ್ತಿತ್ತು. ಗಣಕೀಕೃತ ಟಿಕೆಟ್ ಬಂದ ನಂತರ ಹಳೆಯ ಕಾಲದ ಟಿಕೆಟ್‌ಗಳು ಜನಮಾನಸದಿಂದ ಮರೆಯಾಗಿವೆ. ಆದರೆ, ತನ್ನಲ್ಲಿಗೆ ಬರುವ ಪ್ರಯಾಣಿಕರಿಗೆ ಹಿಂದಿನ ಕಾಲದ ಟಿಕೆಟ್ ಮಾದರಿಯನ್ನು ನೆನಪಿಸುವಂತಹ ಕಾರ್ಯವನ್ನು ಬೆಳಗಾವಿ ರೈಲು ನಿಲ್ದಾಣ ಮಾಡುತ್ತಿದೆ.

ಬೆಳಗಾವಿ ರೈಲು ನಿಲ್ದಾಣದ ಪ್ರವೇಶ ದ್ವಾರದಲ್ಲಿ ಹಳೆ ಕಾಲದ ರೈಲು ಟಿಕೆಟ್‌ನ ಚಿತ್ರ ಅಳವಡಿಸಲಾಗಿದ್ದು, ಇದು ಪ್ರಯಾಣಿಕರ ಗಮನಸೆಳೆಯುತ್ತಿದೆ. ಈ ಟಿಕೆಟ್ ಬೆಳಗಾವಿ ಪ್ರಯಾಣಕ್ಕೆ ಸಂಬಂಧಿಸಿದ ಜುಲೈ 22, 1997ನೇ ತಾರೀಕಿನದ್ದಾಗಿದೆ. ಇದರ ಶುಲ್ಕ ₹30. ಟಿಕೆಟ್ ಕ್ರಮ ಸಂಖ್ಯೆ ಹಾಗೂ ಪ್ರಯಾಣಿಸುವ ದರ್ಜೆ, ಪ್ರಯಾಣಿಸಬೇಕಾದ ದೂರ ಮೊದಲಾದ ವಿವರಗಳನ್ನು ಇದು ಒಳಗೊಂಡಿದೆ. ಈ ಚಿತ್ರ ಹಿಂದಿನ ಕಾಲದ ಟಿಕೆಟ್‌ಗಳನ್ನು ನೆನಪಿಸುವ ಮೂಲಕ, ಜನರು ರೈಲು ಕೌಂಟರ್‌ಗಳಲ್ಲಿ ಕೈಯಾರೆ ಅಥವಾ ಯಂತ್ರದಿಂದ ಮುದ್ರಿಸಲಾದ ಟಿಕೆಟ್‌ಗಳನ್ನು ನೀಡುತ್ತಿದ್ದ ದಿನಗಳನ್ನು ನೆನಪಿಸುತ್ತದೆ.

–ಜಿ. ಪದ್ಮಾ, ಸಂಡೂರು





# ಆಶಾಕಿರಣವೀ ಮೇಣದಬತ್ತಿ ಸ್ಟ್ಯಾಂಡ್

ಭಾರತದಲ್ಲಿ ಹಲವ ಧರ್ಮಗಳಿವೆ. ಇಲ್ಲಿನ ಧರ್ಮಗಳು ಅವುಗಳದ್ದೇ ಆದ ಧಾರ್ಮಿಕ ನಂಬಿಕೆಗಳನ್ನು ಹೊಂದಿವೆ. ನನಗೆ ಈ ಅನುಭವ ಹೊಸದು ಇತ್ತೀಚೆಗೆ ನಾನು ಮಂಗಳೂರಿನಲ್ಲಿರುವ ಬಾಲೊಕ್ ಜೆಜು ಎನ್ನುವ ಕ್ರೈಸ್ತರ ಧಾರ್ಮಿಕ (ಚರ್ಚ್) ಸ್ಥಳಕ್ಕೆ ಭೇಟಿ ಕೊಟ್ಟಿದ್ದೆ. ಆ ಚರ್ಚಿನ ಆವರಣದಲ್ಲಿ ನನಗೆ ಈ ಮೇಣದಬತ್ತಿ ಸ್ಟ್ಯಾಂಡ್ ಕಣ್ಣಿಗೆ ಬಿತ್ತು. ಅಲ್ಲಿ ಸುಮಾರು ಜನ ಮೇಣದಬತ್ತಿ ಬೆಳಗಿಸುತ್ತಿದ್ದರು.



ಕುತೂಹಲವೆನಿಸಿ ಆ ಬಗ್ಗೆ ಅಲ್ಲಿದ್ದವರನ್ನು ಕೇಳಿದೆ. ಅದಕ್ಕವರು, 'ಇದು ನಮ್ಮ ಪ್ರಮುಖ ಧಾರ್ಮಿಕ ನಂಬಿಕೆ. ಸ್ಟ್ಯಾಂಡ್ ಅಲ್ಲಿ ಮೂರು ಮೇಣದಬತ್ತಿ ಬೆಳಗಿಸಿ, ಮನಸಲ್ಲಿ ಏನಾದರು ಅಂದುಕೊಂಡು, ಆ ಕೆಲಸ ಯಶಸ್ವಿಯಾಗಲೆಂದು ಬೇಡಿಕೊಂಡರೆ ಅದು ಈಡೇರುತ್ತದೆ. ಮೇಣದ ಬತ್ತಿ ಅರ್ಧ ಸುಟ್ಟ ಮೇಲೆ ಅಲ್ಲಿಯೇ ಅದನ್ನು ಇಟ್ಟು ಬಂದಲ್ಲಿ ನಮ್ಮ ಬೇಡಿಕೆಗಳು ಈಡೇರುತ್ತವೆ' ಎಂದರು. ಭಾರತದಲ್ಲಿ ನೆಲೆಸಿರುವ ಎಲ್ಲಾ ಧರ್ಮಗಳು ಅವುಗಳದ್ದೇ ಆದ ಪ್ರತ್ಯೇಕ ನಂಬಿಕೆಯನ್ನು ಹೊಂದಿರುವುದು ವಿಶೇಷ.

–ಹನುಮಂತ ಎಸ್.ಕೆ., ರಾಯಚೂರು



# ಕೊಚ್ಚಿಯ ವಾಸ್ಕೋಡಿಗಾಮನ ಸಮಾಧಿ

ಭಾರತಕ್ಕೆ ಯೂರೋಪ್ ಸಂಪರ್ಕಿಸುವ ಸಮುದ್ರ ಮಾರ್ಗವನ್ನು ಮೊದಲಿಗೆ ಕಂಡುಹಿಡಿದ ಪೋರ್ಚುಗೀಸ್ ನಾವಿಕ ವಾಸ್ಕೋಡಿಗಾಮನ ಸಮಾಧಿ ನಮ್ಮ ದೇಶದ ಕೊಚ್ಚಿಯಲ್ಲಿದೆ ಎಂದರೆ ಹಲವರಿಗೆ ಅಚ್ಚರಿ ಆಗಬಹುದು. ಸಮುದ್ರ ಮಾರ್ಗದ ಮೂಲಕ 1498ರಲ್ಲಿ ಮೊದಲ ಬಾರಿಗೆ ಕೊಚ್ಚಿಗೆ ಬಂದ ವಾಸ್ಕೋಡಿಗಾಮ ಭಾರತದ ಸಾಂಬಾರ ಪದಾರ್ಥಗಳ ವ್ಯಾಪಾರದ ಮೇಲೆ ಪೋರ್ಚುಗೀಸರು ಅಧಿಪತ್ಯ ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ. ಭಾರತಕ್ಕೆ ಮೂರನೇ ಬಾರಿ ಸಮುದ್ರ ಮಾರ್ಗದ ಮೂಲಕ ಬಂದಾಗ ವಾಸ್ಕೋಡಿಗಾಮ 1524ರಲ್ಲಿ ಮರಣವನ್ನಪ್ಪುತ್ತಾನೆ. ಆಗ ಕೊಚ್ಚಿ ಕೋಟೆಯಲ್ಲಿರುವ ಸೆಂಟ್ ಫ್ರಾನ್ಸಿಸ್ ಚರ್ಚಿನಲ್ಲಿ ಪಾರ್ಥಿವ ಶರೀರವನ್ನು ಹೂಳಲಾಯಿತು. ಬಳಿಕ 15 ವರ್ಷದ ನಂತರ ಪೋರ್ಚುಗೀಸ್‌ಗೆ ಪಾರ್ಥಿವ ಶರೀರದ ಅವಶೇಷಗಳನ್ನು ತೆಗೆದುಕೊಂಡು ಹೋಗಲಾಯಿತು.

ಇಂದಿಗೂ ಕೊಚ್ಚಿಯ ಸೆಂಟ್ ಫ್ರಾನ್ಸಿಸ್ ಚರ್ಚಿನಲ್ಲಿ ವಾಸ್ಕೋಡಿಗಾಮನ ಸಮಾಧಿ ಮಾಡಿದ ಸ್ಥಳವನ್ನು ಸಂರಕ್ಷಿಸಿಡಲಾಗಿದೆ. ಈ ಚರ್ಚ್ ಅನ್ನು ಪೋರ್ಚುಗೀಸರು 1503ರಲ್ಲಿ ಕಟ್ಟಿದ್ದು, ಭಾರತದಲ್ಲಿ ಯುರೋಪಿಯನ್ನರು ಕಟ್ಟಿದ ಅತೀ ಹಳೆಯ ಚರ್ಚ್ ಎನಿಸಿದೆ. ವಾಸ್ಕೋಡಿಗಾಮನ ಸಮುದ್ರ ಮಾರ್ಗದ ಅನ್ವೇಷಣೆ ಭಾರತದ ಇತಿಹಾಸವನ್ನು ಬದಲಿಸಿತು. ಕೊಚ್ಚಿಗೆ ಪ್ರವಾಸ ಹೋದಾಗ ಈ ಐತಿಹಾಸಿಕ ಸ್ಥಳವನ್ನು ನೋಡಬಹುದು.

–ಅರುಣ್ ಕಿಲ್ಲೂರು

